**ದಿನಾಂಕಃ 16.07.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದಪಾಟಿಸವಾಲುಃ ಶ್ರೀ ಎನ್ ಎಸ್ ವಕೀಲರಿಂದಃ ಅರ್ಜಿದಾರರ ಪರವಾಗಿಃ**

ನನ್ನ ಅಸೆಟ್ಸ ಅಂಡ್ ಲಯಬಿಲಿಟಿ ಸ್ಟೆಟ್ಮೆಂಟಿನಲ್ಲಿ ನಾನು ಮತ್ತು ಅರ್ಜಿದಾರರು ಯಾವಾಗ ಬೇರಯಾಗಿದ್ದೀವಿ ಎಂದು ಹೇಳಲಾಗಿಲ್ಲ. ಅದರಲ್ಲಿ ನನ್ನ ವೈದ್ಯಕೀಯ ವೆಚ್ಚ, ಜೀವನಕ್ಕೆ ಮಾಸಿಕವಾಗಿ ಎಷ್ಟು ಖರ್ಚಾಗುತ್ತದೆ ಎಂದು ವಿವರಾಗಿ ಹೇಳಿರುವುದಿಲ್ಲ. ಕೈಸಾಲದ ಬಗ್ಗೆ ಅದರಲ್ಲಿ ವಿವರವಾಗಿ ಹೇಳಿರುವುದಿಲ್ಲ. ಮೈಸೂರಿನ ಜಯಲಕ್ಷ್ಮೀಪುರ ಬ್ರಾಂಚಿನ **IDBI bank** ನಲ್ಲಿ ನನ್ನ ಖಾತೆ ಇರುತ್ತದೆ. ಅದು **6-7** ವರ್ಷದಿಂದ ಇರುತ್ತದೆ. ಸದರಿ ಖಾತೆ ಈಗಲೂ ಚಾಲ್ತಿಯಲ್ಲಿದ್ದು ನನ್ನ ಎಲ್ಲಾ ವ್ಯವಹಾರವನ್ನು ಅದರ ಮುಖಾಂತರ ಮಾಡುತ್ತೇವೆ ಎಂದರೆ ನಿಜ. ಕಲಂ ನಂ.**9** ರಲ್ಲಿ ಅದರ ವಿವರಣೆಯನ್ನು ಕೊಟ್ಟಿರುವುದಿಲ್ಲ. ನಾನು ಮೊದಲ ಪಾಟೀಸವಾಲಿನಲ್ಲಿ ಎರಡು ಕಡೆ ಕೆಲಸಕ್ಕೆ ಹೋಗಿರುವ ಬಗ್ಗೆ **statement** ನಲ್ಲಿ ಹೇಳಿರುವುದಿಲ್ಲ. ನನಗೆ ರೂ.**25,000/-** ಜೀವನಕ್ಕೆ ಬೇಕು ಎಂದು **statement** ನಲ್ಲಿ ಹೇಳಿರುವುದಿಲ್ಲ. ಸುಳ್ಳು ಮಾಹಿತಿ **statement** ನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ,
ಚಿಕ್ಕನಾಯಕನಹಳ್ಳಿ.